

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 129

ಉತ್ತರಿಸಬೇಕಾದ ದಿನಾಂಕ : 16.02.2022.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಇಲ್ಲಿಯ ತನಕ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ 30 ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆ ತೆರೆಯುವ ಪ್ರಕ್ರಿಯೆ ಜಾರಿಯಲ್ಲಿದೆ. ಗೋಶಾಲೆಗಳಿಗೆ ಸ್ಥಳ ಗುರುತಿಸಿರುವ ವಿವರ **ಅನುಬಂಧ-1 ರಲ್ಲಿ ನೀಡಲಾಗಿದೆ.** ಇಲ್ಲಿಯವರೆಗೆ ತುಮಕೂರು, ಚಿಕ್ಕಬಳ್ಳಾಪುರ, ಹಾಸನ, ಚಿಕ್ಕಮಗಳೂರು, ಹಾವೇರಿ, ಕೊಪ್ಪಳ, ವಿಜಯಪುರ, ಬೆಳಗಾವಿ ಮತ್ತು ಕೊಡಗು ಜಿಲ್ಲೆಗಳಲ್ಲಿ ಗೋಶಾಲೆಯ ಭೂಮಿ ಪೂಜೆಯನ್ನು ನೇರವೇರಿಸಲಾಗಿದೆ. ಶೀಘ್ರದಲ್ಲಿಯೇ ಗೋಶಾಲೆಗಳನ್ನು ಪ್ರಾರಂಭಿಸಲಾಗುವುದು.
ಆ	ಈ ಗೋಶಾಲೆಗಳನ್ನು ಆರಂಭಿಸಲು ಮತ್ತು ನಿರ್ವಹಣೆ ಮಾಡಲು ಸರ್ಕಾರ ಯಾವ ಮಾರ್ಗಸೂಚಿ ರಚನೆ ಮಾಡಲಾಗಿದೆ; (ವಿವರ ನೀಡುವುದು)	**ಅನುಬಂಧ-2 ನೀಡಲಾಗಿದೆ.**
ಇ	ಆರಂಭಿಸಿರುವ ಗೋಶಾಲೆಗಳಿಗೆ ಇಲ್ಲಿಯ ತನಕ ಸರ್ಕಾರ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ; ಇದಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು, (ವಿವರವಾದ ಮಾಹಿತಿಯನ್ನು ನೀಡುವುದು)	**ಅನುಬಂಧ-3 ರಲ್ಲಿ ನೀಡಲಾಗಿದೆ.** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆ ಪ್ರಾರಂಭಿಸಲು ಸ್ಥಳಗುರುತಿಸಲಾಗಿದ್ದು, ಗೋಶಾಲೆಯ ಸ್ಥಳ ಸಮತಟ್ಟು ಮಾಡಲಾಗುತ್ತಿದೆ. ಇಲ್ಲಿಯವರೆಗೆ ಮೈಸೂರು ಜಿಲ್ಲೆಗೆ ₹53.50 ಚಾಮರಾಜನಗರ ಜಿಲ್ಲೆಗೆ ₹53.50 ಅನುದಾನ ಬಿಡುಗಡೆ ಗೊಳಿಸಲಾಗಿದೆ.
ಈ	ಖಾಸಗಿಯವರಿಂದಲೂ ಗೋಶಾಲೆಗಳನ್ನು ತೆರೆಯಲು ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಖಾಸಗಿಯವರು ಗೋಶಾಲೆಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಅಗತ್ಯ ಇರುವುದಿಲ್ಲ. ಸರ್ಕಾರದಿಂದ ಸಹಾಯಾನುದಾನ ಬೇಕಾದ್ದಲ್ಲಿ ನಿಯಮಾನುಸಾರ ಜಿಲ್ಲಾ ಪ್ರಾಣಿ ದಯಾ ಸಂಘದ ಮೂಲಕ ಅರ್ಜಿ ಸಲ್ಲಿಸಿದಲ್ಲಿ ವಂಟನ ಲಭ್ಯತೆಗೆ ಅನುಗುಣವಾಗಿ ಸಹಾಯಾನುದಾನ ನೀಡಲಾಗುತ್ತದೆ.

ಉ	ಖಾಸಗಿಯಾಗಿ ಗೋಶಾಲೆಯನ್ನು ತೆರೆಯಲು ಮುಂದೆ ಬರುವ ಸಂಘ ಸಂಸ್ಥೆಗಳಿಗೆ ಸರ್ಕಾರ ನೀಡುವ ಸವಲತ್ತುಗಳೇನು? (ವಿವರ ನೀಡುವುದು)	ಅನುಬಂಧ-4 ರಲ್ಲಿ ನೀಡಲಾಗಿದೆ.

ಪಸಂಮೀ ಇ-23 ಸಲೆವಿ 2022

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು

ಅನುಬಂಧ - 1 update

ಸರ್ಕಾರಿ ಗೋಶಾಲೆ ನಿರ್ಮಿಸಲು 26 ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯಿಂದ ಜಮೀನು ಹಸ್ತಾಂತರವಾಗಿರುವ ಮಾಹಿತಿ ವಿವರ

ಕ್ರ. ಸಂ	ಜಿಲ್ಲೆಗಳು	ಸರ್ಕಾರಿ ಗೋಶಾಲೆ ಜಮೀನಿನ ವಿವರ	ಜಾಗದ ವಿಸ್ತೀರ್ಣ	ಪ್ರಗತಿಯ ಹಂತ ಜಾಗದ ವಿಸ್ತೀರ್ಣ
1	ಬೆಂಗಳೂರು ನಗರ	ದೊಡ್ಡಬಳ್ಳಾಪುರ ತಾಲುಕು ಮಧುರೆ ಹೋಬಳಿ, ಕೋಡಿಹಳ್ಳಿ ಗ್ರಾಮ ಸರ್ವೆ.ನಂ97	35.22	ನಿರ್ಮಿತಿ ಕೇಂದ್ರದಿಂದ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದೆ. PIL ಇರುವುದರಿಂದ ಮಾರ್ಗದರ್ಶನಕ್ಕಾಗಿ ದಿನಾಂಕ 07-02-22 ರಂದು ಆಯುಕ್ತಾಲಯಕ್ಕೆ ಪತ್ರ ಬರೆದಿರುತ್ತಾರೆ
2	ಬೆಂಗಳೂರು ಗ್ರಾ.	ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೇಹಳ್ಳಿ 10 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ.	10.00	ಗೋಶಾಲೆಗೆ ಗುರುತಿಸಿರುವ ಜಮೀನಿನನ್ನು ಸಮತಟ್ಟು ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಈ ಜಮೀನಿನಲ್ಲಿರುವ ಮರಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ರವರು ಟೆಂಡರ್ ಕರೆದಿದ್ದು, ಶೀಘ್ರದಲ್ಲಿ ಮರಗಳನ್ನು ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ. ಗೋಶಾಲೆಯಲ್ಲಿನ ಕೆಲಸಗಳನ್ನು ಪ್ರಾರಂಭಿಸಲು ನಿರ್ಮಿತಿ ಕೇಂದ್ರದಿಂದ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದ್ದು, ಬಿಡುಗಡೆಯಾಗಿರುವ ವೆಚ್ಚ ಮಾಡಲಾಗುವುದು.
3	ತುಮಕೂರು	ಶಿರಾ ತಾಲ್ಲೂಕಿನಲ್ಲಿ ಹುಲಕುಂಟೆ ಹೋಬಳಿ, ಚಿಕ್ಕಬಾಣಗೇರ ಗ್ರಾಮದ ಸ.ನ.204 ರಲ್ಲಿ 9.2 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ. RTC ಪಡೆಯಲಾಗಿದೆ.	9.20	ದಿನಾಂಕ 24-01-22 ರಂದು ಭೂಮಿಪೂಜೆ ಮಾಡಲಾಗಿದ್ದು, ಗೋಶಾಲೆ ಜಮೀನು ಸಮತಟ್ಟು ಕಾರ್ಯ ನಡೆಯುತ್ತಿದೆ.
4	ಚಿಕ್ಕಬಳ್ಳಾಪುರ	ನಾಗಿರೆಡ್ಡಿಹಳ್ಳಿ, ಭುಶಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲುಕು.ಸ.ನ.41 ರಲ್ಲಿ 9.38 ಎಕರೆ.	9.38	ಜಿಲ್ಲಾ ಉಸ್ತುವಾರಿ ಸಚಿವರಿಂದ ಭೂಮಿಪೂಜ ನೆರವೇರಿಸಲಾಗಿದೆ. ಗೋಶಾಲೆ ಜಮೀನು ಸಮತಟ್ಟು ಮಾಡುವ ಕಾರ್ಯ ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ₹7.29 ಲಕ್ಷಗಳ ಕಾಮಾಗಾರಿ ನಡೆದಿದ್ದು, ಹಣ ಬಿಡುಗಡ ಮಾಡಲಾಗುತ್ತದೆ.
5.	ಹಾಸನ	ಅರಸೀಕೆರೆ ತಾಲುಕು ಹಬ್ಬನಗಟ್ಟ ಕಾವಲು, ಬೋರನಕೊಪ್ಪಲು ಸ.ನ.2/70 ರಲ್ಲಿ 20-25 ಎಕರೆ.	25.00	ಗೋಶಾಲೆ ಜಮೀನು ಸಮತಟ್ಟು ಮಾಡಲಾಗಿದೆ. ಕೊಳವೆ ಬಾವಿ ಕೊರಿಸಲು ಜಾಗ ಗುರುತಿಸಲಾಗಿದ್ದು, ಶೀಘ್ರದಲ್ಲಿಯೇ ಕೊಳವೆ ಬಾವಿ ಕೊರಿಸಿ ವಿದ್ಯುತ್ ಸಂಪರ್ಕ ಪಡೆಯಲಾಗುವುದು. ದಿನಾಂಕ:07-02-2022 ಭೂಮಿ ಪೂಜೆ ನೆರವೇರಿಸಲಾಗಿದೆ.
6.	ಬಾಗಲಕೋಟೆ	ಬೀಳಗಿ ತಾಲೂಕಿನ ಬೂದಿಹಾಳ ಎಸ್.ಹೆಚ್ ಗ್ರಾಮ ದಲ್ಲಿನ ಸರ್ವೆ ನಂ.95 ರಲ್ಲಿ 114.06 ಎಕರೆ ಪೈಕಿ 9.2 ಎಕರೆ.	9.20	ನರೇಗಾ ಯೋಜನೆಯಡಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದ್ದು, ಶೀಘ್ರದಲ್ಲೇ ಕೆಲಸ ಪ್ರಾರಂಭಿಸಲಾಗುವುದು. ಉಳಿದ ಕೆಲಸಗಳನ್ನು ನಿರ್ಮಿತಿ ಕೇಂದ್ರದಿಂದ ಪ್ರಾರಂಭಿಸಲಾಗುವುದು.
7.	ಮೈಸೂರು	ವರುಣ ಹೋಬಳಿ, ಆಯರ ಹಳ್ಳಿ,ಮೈಸೂರು ಸ.ನ.212 ರಲ್ಲಿ 10ಎಕರೆ.	10.00	ಕೊಳವ ಬಾವಿ ಕೊರಿಸಲು ಹಾಗೂ ವಿದ್ಯುತ್ ಕಂಬಗಳನ್ನು ಹಾಕಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ. ಗೋಶಾಲೆಯ ಇತರೆ ಕೆಲಸಕಾರ್ಯಗಳನ್ನು ಮಾಡಿಸಲು KRIDLಗೆ ರೂ.47.95 ಲಕ್ಷಗಳಿಗೆ ಆದೇಶ ನೀಡಲಾಗಿದೆ.

8.	ಚಿಕ್ಕಮಗಳೂರು	ಕಡೂರು ತಾಲುಕು, ಎಮ್ಮೆದೊಡ್ಡಿ ಭಾಗದಲ್ಲಿ ಇಲಾಖೆಯ ಅಧೀನದಲ್ಲಿರುವ ಗೋಸದನದ ಜಾಗ ಸ,ನ.70 ರಲ್ಲಿ, 11ಎಕರೆ.	11.00	150 ಜಾನುವಾರು ನಿರ್ವಹಣೆಗೆ ಶೆಡ್ಡನ್ನು ನಿರ್ಮಿಸಲಾಗಿರುತ್ತದೆ. ಶೆಡ್ಡು ಸುತ್ತ ಕಂಪೌಂಡನ್ನು ಕಟ್ಟಲಾಗಿದೆ. ಬೋರವೇಲ್ ಹಾಕಿಸಲಾಗಿದೆ. ವಿದ್ಯುತ್ ಸಂಪರ್ಕ ಅಳವಡಿಸಲಾಗಿದೆ. ಗೋಶಾಲೆ ಉದ್ಘಾಟನಗೆ ದಿನಾಂಕ ನಿಗದಿಯಾಗಬೇಕಾಗಿರುತ್ತದೆ.
9.	ದಕ್ಷಿಣ ಕನ್ನಡ	ಕಡಬ ತಾಲುಕು,ರಾಮಕುಂಜ ಗ್ರಾಮ, ಜಾನುವಾರು ಸಂವರ್ದನಾ ಮತ್ತು ತರಬೇತಿ ಕೇಂದ್ರ,ಕೊಯ್ಲ ಕ್ಷೇತ್ರ ಸ.ನ.233,299/1,2,3 ಒಟ್ಟು 98.45 ಎಕರೆ	98.45	ಭೂಮಿ ಸಮತಟ್ಟು ಮಾಡಲಾಗಿದೆ. ನಿರ್ಮಿತಿ ಕೇಂದ್ರದಿಂದ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದ್ದು, ಕೆಲಸ ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.
10	ರಾಯಚೂರು	ರಾಯಚೂರು ತಾಲುಕು ಯರಗೇರಾ ಹೋಬಳಿ, ಜಂಬಲದಿನ್ನಿ ಗ್ರಾಮ,ಸ.ನ. 138/ಎ,ರಲ್ಲಿ 6.00ಎಕರೆ.	6.00	ಗೋಶಾಲೆ ಭೂಮಿ ಸಮತಟ್ಟು ಮಾಡಲಾಗಿದೆ. ನರೇಗಾ ಯೋಜನೆ ಅಡಿಯಲ್ಲಿ ಗೋಶಾಲೆಯ ಕೆಲಸಗಳನ್ನು ಮಾಡಿಸಲು ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆ.
11.	ಹಾವೇರಿ	ಗುತ್ತಲ ಕುರಿ ಸಂವರ್ದನಾ ಕೇಂದ್ರದ ಸ.ನ. 371 -374 ರಲ್ಲಿ 25 ಎಕರೆ	25.00	ಭೂಮಿ ಸಮತಟ್ಟು ಮಾಡಲಾಗಿದೆ. ಶೆಡ್ಡು ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಬೋರವೇಲ್ ಹಾಕಿಸಲಾಗಿರುತ್ತದೆ, ವಿದ್ಯುತ್ತ ಸಂಪರ್ಕ ಕಲ್ಪಿಸಲಾಗಿದೆ. ಈಗಾಗಲೇ ಬಿಡುಗಡೆ ಮಾಡಲಾದ ರೂ.36.00 ಲಕ್ಷಗಳು ವೆಚ್ಚ ಮಾಡಲಾಗಿದೆ. ಗೋಶಾಲೆ ಉದ್ಘಾಟನೆಗೆ ಶೀಘ್ರದಲ್ಲಿಯೇ ಸಿದ್ದವಾಗುತ್ತದೆ.
12.	ಗದಗ	ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಆವರಣ ಹರ್ತಿ ಗ್ರಾಮ,ಸ.ನ.179	10.00	RDPR ವಿಶ್ವವಿದ್ಯಾಲಯ ಮತ್ತು ಪಶು ಸಂಗೋಪನ ಇಲಾಖೆಯ ಸಹಯೋಗದಲ್ಲಿ ಗೋಶಾಲೆ ಸ್ಥಾಪಿಸಲಾಗುವುದು. RDPR ವಿಶ್ವವಿದ್ಯಾಲಯದಿಂದ ಶೇ. 50% ಕಾಮಗಾರಿ ವೆಚ್ಚ ಭರಿಸಲು ಒಪ್ಪಿಕೊಂಡಿರುತ್ತಾರೆ. ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆ.
13.	ಬಳ್ಳಾರಿ/ ವಿಜಯನಗರ	ವಿಜಯ ನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ, ತಾಲುಕು, ವರ್ಲಹಳ್ಳಿ ಗ್ರಾಮದ ಸ.ನ. 39 ರಲ್ಲಿ 10.52 ಎಕರೆ ಪೈಕಿ 9.88 ಎಕರೆ	9.88	ವಿಜಯ ನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ, ತಾಲುಕು, ವರ್ಲಹಳ್ಳಿ ಗ್ರಾಮದಲ್ಲಿ ಗೋಶಾಲೆ ನಿರ್ಮಿಸಲು ರೂ.125.00 ಲಕ್ಷಗಳ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆ. ಇಲಾಖೆಯಿಂದ ಇದುವರೆಗೂ ರೂ.13.90. ಲಕ್ಷ ಹಣವನ್ನು ಕೊಳವೆ ಬಾವಿ ಕೊರಿಸಲು, ವಿದ್ಯುತ್ ಸಂಪರ್ಕ ಕಲ್ಪಿಸಲು ಹಾಗೂ ಬೇಲಿ ನಿರ್ಮಾಣಕ್ಕಾಗಿ ನಿರ್ಮಿತಿ ಕೇಂದ್ರಕ್ಕೆ ಬಿಡುಗಡೆಗೊಳಿಸಲಾಗಿದೆ.
14.	ಕೊಪ್ಪಳ	ಯಲಭುರ್ಗಾ ತಾಲುಕು,ಭೇವೂರ ಗ್ರಾಮ, ಗಾಯರಾಣ ಸ.ನ.151 ರಲ್ಲಿ 10.00 ಎಕರೆ	10.00	ಜಿಲ್ಲಾ ಉಸ್ತುವಾರಿ ಸಚಿವರಿಂದ ದಿನಾಂಕ 01-11-21ರಂದು ಭೂಮಿ ಪೂಜೆ ನೆರವೇರಿಸಲಾಗಿದೆ, ಕೊಳವೆ ಭಾವಿ ಕೊರೆಸಲಾಗಿದೆ, ವಿದ್ಯುತ್ತ ಸಂಪರ್ಕ ಕಲ್ಪಿಸಲಾಗುತ್ತಿದೆ. ಶೆಡ್ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ.
15.	ದಾವಣಗೆರೆ	ಹೊಸಹಳ್ಳಿ ಗ್ರಾಮ, ಆನಗೋಡು ಹೋಬಳಿ, ದಾವಣಗೆರೆ ತಾಲ್ಲೂಕು. ಸ.ನ.35 ರಲ್ಲಿ 7.00ಎಕರೆ	7.00	ಗೋಶಾಲೆಯಲ್ಲಿ ಶೆಡ್ ನಿರ್ಮಾಣ ಹಾಗೂ ಇತರೆ ಕೆಲಸಕಾರ್ಯಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಪ್ರಾರಂಭಿಸಲಾಗಿದೆ.

16.	ಚಾಮರಾಜನಗರ	ಬೆಮಹಳ್ಳಿ, ಚಾಮರಾಜನಗರ ತಾಲ್ಲೂಕು 9.00 ಎಕರೆ	9.00	ಗೋಶಾಲೆಯಲ್ಲಿ ಶೆಡ್ ನಿರ್ಮಾಣ ಹಾಗೂ ಇತರೆ ಕೆಲಸಕಾರ್ಯಾಗಳನ್ನು ನಿರ್ಮಿತಿ ಕೇಂದ್ರದಿಂದ ರೂ.86.00 ಲಕ್ಷಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ಕೆಲಸ ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.
17	ಚಿತ್ರದುರ್ಗ	ಕುರಡಿಹಳ್ಳಿ ಗ್ರಾಮ ಕಸಬಾ ಹೋಬಳಿ, ಚೆಳ್ಳಕೆರೆ ತಾಲ್ಲೂಕು ಸ.ನ.77 ರಲ್ಲಿ 9.36 ಎಕರೆ	9.36	ಜಮೀನು ಸಮತಟ್ಟು ಕಾರ್ಯ, ಕೊಳವೆ ಬಾವಿ ಕೊರೆಸಿವುದು, ಬೇಲಿ ನಿರ್ಮಾಣ ಮಾಡುವ ಕೆಲಸ ನಡೆಯುತ್ತಿದೆ.
18.	ವಿಜಯಪುರ	ವಿಜಯಪುರ ತಾಲುಕು ಬುರಣಾಪೂರ ಗ್ರಾಮದ ಸ.ನ.53 ಅ/1/1 ರ ಕ್ಷೇತ್ರ 316 ಎಕರೆ 29 ಗು. ಗಾಯರಾಣ ಜಮೀನಿನ ಪೈಕಿ 10.00 ಎಕರೆ	10.00	ಭೂಮಿ ಸಮತಟ್ಟು ಮಾಡಲಾಗಿದೆ. ರೂ.22.00 ಲಕ್ಷಗಳಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಮಿತಿ ಕೇಂದ್ರಕ್ಕೆ ಸಲ್ಲಿಸಲಾಗಿದೆ. ದಿನಾಂಕ:01-02-2022 ರಂದು ಭೂಮಿ ಪೂಜೆ ನೆರವೇರಿಸಿದೆ. ನರೇಗಾ ವತಿಯಿಂದ ಕೆಲಸ ಪ್ರಗತಿಯಲ್ಲಿದೆ
19.	ರಾಮನಗರ	ವಧಾರಗುಪ್ಪೆ ಗ್ರಾಮ, ಚೆನ್ನಪಟ್ಟಣ ತಾಲ್ಲೂಕುಸ.ನ.20 ರಲ್ಲಿ 8.00ಎಕರೆ ಜಮೀನು	8.00	ಗೋಶಾಲೆ ಜಮೀನನ್ನು ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದೆ.
20	ಬೆಳಗಾವಿ	ಹುಕ್ಕೇರಿ ತಾಲ್ಲೂಕು ಬೆಳವಿ ಗ್ರಾಮ, ಸ.ನ.645 ರಲ್ಲಿ 19.04 ಎಕರೆ	19.04	ದಿ.25-01-22 ರಂದು ಭೂಮಿ ಪೂಜೆ ಮಾಡಲಾಗಿದೆ. ಗೋಶಾಲೆ ಜಮೀನನ್ನು ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದೆ
21.	ಮಂಡ್ಯ	ಮದ್ದೂರು ತಾಲ್ಲೂಕು ಚಿಕ್ಕ ಅಂಕನ ಹಳ್ಳೀ ಗ್ರಾಮ ಸ.ನ.804/6ರಲ್ಲಿ 10.00 ಎಕರೆ	10.00	ಗೋಶಾಲೆಯಲ್ಲಿ ಶೆಡ್ ನಿರ್ಮಾಣ ಹಾಗೂ ಇತರೆ ಕೆಲಸಕಾರ್ಯಾಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಕೆಲಸ ಪ್ರಾರಂಭಿಸ ಬೇಕಾಗಿರುತ್ತದೆ.
22	ಕೊಡಗು	ಮಡಿಕೇರಿ ತಾಲ್ಲೂಕು, ನಿಡುಗಣೆ ಗ್ರಾಮ, ಸ.ನ.22/1 ರಲ್ಲಿ 20.89 ಎಕರೆ ಪೈಕಿ 8.00 ಎಕರೆ	8.00	28-01-22 ಭೂಮಿ ಪೂಜೆ ಆಗಿದೆ. ಗೋಶಾಲೆ ಜಮೀನನ್ನು ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದೆ. ನಿರ್ಮಿತಿ ಕೇಂದ್ರದಿಂದ ಕ್ರಿಯಾ ಯೋಜನೆ ಪಡೆಯಲಾಗಿದೆ ಹಾಗೂ ₹27.00 ಲಕ್ಷಗಳನ್ನು ನಿರ್ಮಿತಿ ಕೇಂದ್ರಕ್ಕೆ ಬಿಡುಗಡೆ ಮಾಡಲಾಗಿದೆ.ಕೊಳವೆಬಾವಿ Piont ಗುರುತಿಸಲಾಗಿದೆ.
23	ಧಾರವಾಡ	ಮದನಬಾವಿ ಗ್ರಾಮ, ತೇಗೂರು ಹತ್ತಿರ, ಸ.ನ.214 ರಲ್ಲಿ 10.00 ಎಕರೆ.	10.00	ಗೋಶಾಲೆ ಜಮೀನನ್ನು ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದೆ.
24	ಕೋಲಾರ	ಗುಟ್ಟಹಳ್ಳಿ /ಬಂಗಾರ ತಿರುಪತಿ ಗ್ರಾಮ,ಕೆ.ಜಿ.ಎಫ್. ತಾಲ್ಲೂಕು ಬೇತಮಂಗಲ ಹೋಬಳಿ ವೆಂಕಟಾಪುರ ಗ್ರಾಮದ ಸ. ನಂ 67 ರಲ್ಲಿ 9.36 ಎಕರೆ.	9.36	ಗ್ರಾಮ ಪಂಚಾಯತಿಯಿಂದ ಗೋ ಕಟ್ಟೆ ನಿರ್ಮಿಸಲಾಗಿದೆ, ಗೋಶಾಲೆ ಜಮೀನನ್ನು ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದೆ
25	ಉಡುಪಿ	ಹೆಬ್ರಿ ತಾಲ್ಲೂಕು, ಕೆರೆಬೆಟ್ಟು ಗ್ರಾಮ, ಸ.ನ.79/2 ರಲ್ಲಿ 13.24 ಎಕರೆ	13.24	ಗೋಶಾಲೆ ಜಮೀನಿಗೆ ಬೇಲಿ ಹಾಕಿಸುವ ಹಾಗೂ ಶೆಡ್ ನಿರ್ಮಾಣ ಕಾಮಗಾರಿಯನ್ನು ನರೇಗಾ ಯೋಜನೆ ಅಡಿ ರೂ.30.00 ಲಕ್ಷಗಳಲ್ಲಿ ಮಾಡಿಲಾಗುತ್ತಿದೆ.
26	ಉತ್ತರ ಕನ್ನಡ	ದುಸಗಿ ಗ್ರಾಮ, ಹಳಿಯಾಳ ತಾಲ್ಲೂಕು ಸರ್ಕಾರಿ ಗಾಯರಾಣ ಸ.ನ.173 ರಲ್ಲಿ 20.00ಎಕರೆ	20.00	ಜಮೀನು ಮಂಜೂರಾಗಿರುತ್ತದೆ.

ಅನುಬಂಧ-2

AHF/65/AHP/2021-AHF_SEC_b_AH_ Animal Husbandry Fisheries sec

ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 65 ಪಸಾಯೋ 2021 ದಿನಾಂಕ:11.08.2021 ಕ್ಕೆ ಅನುಬಂಧ
ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಸ್ಥಾಪಿಸುವ ಸಂಬಂಧ ಮಾರ್ಗಸೂಚಿಗಳು.

1. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಗೋಶಾಲೆಯನ್ನು ಸ್ಥಾಪಿಸುವುದು ಜಿಲ್ಲೆಗಳ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಎಸ್.ಪಿ.ಸಿ.ಎ ಜವಾಬ್ದಾರಿಯಾಗಿರುತ್ತದೆ. ಗೋಶಾಲೆಗಳನ್ನು 2ನೇ ಅಕ್ಟೋಬರ್ 2021 ರೊಳಗಾಗಿ ಸ್ಥಾಪಿಸುವುದು. ಈ ಉದ್ದೇಶಕ್ಕಾಗಿ ಮೊದಲನೇ ಹಾಗೂ ಎರಡನೇ ಕಂತಿನ ಅನುದಾನ ಸೇರಿದಂತೆ ಪ್ರತಿ ಜಿಲ್ಲೆಗೆ ರೂ.24.00 ಲಕ್ಷಗಳನ್ನು ಜಿಲ್ಲೆಗಳ ಜಿಲ್ಲಾಧಿಕಾರಿಯವರಿಗೆ ಬಿಡುಗಡೆಗೊಳಿಸಲಾಗುವುದು. ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಆಯಾ ಜಿಲ್ಲೆಯ ಎಸ್.ಪಿ.ಸಿ.ಎ.ಯು ಈ ಸಂಬಂಧ ಠರಾವು ಪಾಸುಮಾಡಿ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಹೆಚ್ಚಿನ ಅನುದಾನವನ್ನು ಜಿಲ್ಲೆಗಳಿಗೆ ಒದಗಿಸಲಾಗುವುದು.
2. ಗೋಶಾಲೆಗಳನ್ನು ಸ್ಥಾಪಿಸುವಾಗ ಬಂಡವಾಳ ವೆಚ್ಚ ಒಳಗೊಂಡಿರುವುದರಿಂದ, ಜಿಲ್ಲಾಧಿಕಾರಿಗಳು ಪ್ರಸ್ತುತ ಜಾರಿಯಲ್ಲಿರುವ ಇತರೆ ಯೋಜನೆಗಳಾದ ಬಯೋಫೆನ್ಸಿಂಗ್ ನಿರ್ಮಾಣ, ದನದ ಕೊಟ್ಟಿಗೆ, ಕೃಷಿ ಹೊಂಡ, ಮೇವು ಉತ್ಪಾದನೆ ಇತ್ಯಾದಿ ಯೋಜನೆಗಳನ್ನು ಒಗ್ಗೂಡಿಸಿಕೊಳ್ಳುವ ಬಗ್ಗೆ ಜಿಲ್ಲಾ ಪಂಚಾಯತಿ ಮತ್ತು ಇತರೆ ಇಲಾಖೆಗಳೊಂದಿಗೆ ಸಮಾಲೋಚಿಸತಕ್ಕದ್ದು. ಚಿಕ್ಕ ಮರಗಳು ಮತ್ತು ಪೊದೆಗಳು ಸೇರಿದಂತೆ ಮೇವನ್ನು ನಿರಂತರವಾಗಿ ಬೆಳೆಯುವಂತೆ ಯೋಜಿಸುವುದು. ಒಂದುವೇಳೆ, ಯೋಜನೆಗಳನ್ನು ಒಗ್ಗೂಡಿಸಿಕೊಳ್ಳುವುದರ ಮೂಲಕ ಬಂಡವಾಳ ವೆಚ್ಚವನ್ನು ಭರಿಸಲು ಸಾಧ್ಯವಾಗದಿದ್ದಲ್ಲಿ, ಅಂತಹ ವೆಚ್ಚವನ್ನು ಪ್ರಾರಂಭಿಕ ಕಂತಿನ ಮೊತ್ತ ರೂ.24.00 ಲಕ್ಷಗಳಲ್ಲಿ ಭರಿಸತಕ್ಕದ್ದು.
3. ಹೊಸ ಗೋಶಾಲೆಯನ್ನು ಸ್ಥಾಪಿಸುವುದು ಅಥವಾ ಜಿಲ್ಲೆಗಳಲ್ಲಿ ಯಾವುದೇ ಖಾಸಗಿ ಟ್ರಸ್ಟ್‌ಗಳಿಂದ ನಡೆಯುತ್ತಿರುವ ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ ಯಾವುದೇ ಗೋಶಾಲೆಗಳನ್ನು ವಿಸ್ತರಿಸುವ ಅಥವಾ ಪುನಃಸ್ಥಾಪಿಸುವ ಬಗ್ಗೆ ತೀರ್ಮಾನವನ್ನು ಎಸ್.ಪಿ.ಸಿ.ಎ ತೆಗೆದುಕೊಳ್ಳಬಹುದು. ಹೊಸ ಗೋಶಾಲೆಯನ್ನು ಎಸ್.ಪಿ.ಸಿ.ಎ ವತಿಯಿಂದ ಸ್ಥಾಪನೆ ಮಾಡಲು ಮೊದಲ ಆದ್ಯತೆಯನ್ನು ನೀಡುವುದು. ಅಪರೂಪದ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಗೋಶಾಲೆಯನ್ನು ವಿಸ್ತರಿಸಬಹುದೆಂದು ಎಸ್.ಪಿ.ಸಿ.ಎ ಗೆ ಅನಿಸಿದಲ್ಲಿ, ಆಗ ಎಸ್.ಪಿ.ಸಿ.ಎ.ಯು ಸೂಕ್ತ ಕಾರಣಗಳನ್ನು ನಮೂದಿಸತಕ್ಕದ್ದು ಹಾಗೂ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮುಂದುವರೆಯುತಕ್ಕದ್ದು.
4. ಹೊಸ ಗೋಶಾಲೆಯನ್ನಾದರೂ ಸ್ಥಾಪಿಸಲಿ ಅಥವಾ ಅಸ್ತಿತ್ವದಲ್ಲಿರುವ ಗೋಶಾಲೆಯನ್ನಾದರೂ ವಿಸ್ತರಿಸಲಿ. ಜಿಲ್ಲೆಯಲ್ಲಿನ ಒಟ್ಟು ಜಾನುವಾರುಗಳ ಸಂಖ್ಯೆಯಲ್ಲಿ ಕನಿಷ್ಠ ಪಕ್ಷ ಶೇ.0.75 ರಷ್ಟು ಜಾನುವಾರುಗಳಿಗಾದರೂ ಸದರಿ ಗೋಶಾಲೆಗಳಲ್ಲಿ ಸ್ಥಳಾವಕಾಶದ ಲಭ್ಯತೆಯಿದೆಯೇ ಎಂಬುವರ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಈ ಪ್ರಕಾರವಾಗಿ ಎಸ್.ಪಿ.ಸಿ.ಎ.ಯು ಗೋಶಾಲೆಯ ಗಾತ್ರದ ಬಗ್ಗೆ ಯೋಜನೆಯನ್ನು ರೂಪಿಸತಕ್ಕದ್ದು.
5. ಎಸ್.ಪಿ.ಸಿ.ಎ.ಯು ಸ್ವಯಂಸೇವಕರ ಸಹಾಯದಿಂದ ಗೋಶಾಲೆಗಳನ್ನು ನಡೆಸುವುದು. ಒಂದುವೇಳೆ, ಸ್ವಯಂ ಸೇವಕರು ನಿರಂತರವಾಗಿ ಲಭ್ಯವಿರದಿದ್ದ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಎಸ್.ಪಿ.ಸಿ.ಎ. ಸಭೆಯಲ್ಲಿ ಅನುಮೋದಿಸಿರುವಂತೆ ಎಸ್.ಪಿ.ಸಿ.ಎ.ಯು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಬಹುದು

--2

6. ಗೋಶಾಲೆಗಳಿಂದ ಉತ್ಪತ್ತಿಯಾಗುವ [illegible] ಅಥವಾ [illegible] (ಗೋಶಾಲೆಯಿಂದ ಉತ್ಪತ್ತಿಯಾಗುವ ಉತ್ಪನ್ನಗಳನ್ನು [illegible]) [illegible] ಗೋಶಾಲೆಗಳ [illegible] ಗೋಶಾಲೆಗಳ [illegible] ಉಪ-ಉತ್ಪನ್ನಗಳು [illegible] ಕ್ರಮಗಳನ್ನು ಎಸ್.ಪಿ.ಸಿ.ಎ. ಯು ತೆಗೆದುಕೊಳ್ಳತಕ್ಕದ್ದು.

7. ಒಂದು ವೇಳೆ ಯಾವುದೇ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಜಾನುವಾರುಗಳನ್ನು ಅವರುಗಳ ಮನೆಗಳು ಅಥವಾ ಜಾಗಗಳಲ್ಲಿ ನೋಡಿಕೊಳ್ಳಲು ಮುಂದೆ ಬಂದರೆ, ಅಂತಹವರ ಸಾಮರ್ಥ್ಯವನ್ನು ಗುರುತಿಸಿ ಖಚಿತಪಡಿಸಿಕೊಂಡ ನಂತರ ಎಸ್.ಪಿ.ಸಿ.ಎ. ಯು ಅವರಿಗೆ ಅವಕಾಶ ನೀಡುವುದು.

8. ಗೋಶಾಲೆಗಳಲ್ಲಿ ಸಿಸಿಟಿವಿ ಸೌಲಭ್ಯವನ್ನು ಕಲ್ಪಿಸುವುದರ ಬಗ್ಗೆ ಹಾಗೂ 2ನೇ ಅಕ್ಟೋಬರ್ 2021 ರಿಂದ ಇಲಾಖೆ ವತಿಯಿಂದ ಪ್ರಾರಂಭವಾಗುವ ವೆಬ್‌ಲಿಂಕ್ ನಲ್ಲಿ ಗೋಶಾಲೆಗಳ ಬಗ್ಗೆ ದೈನಂದಿನ ವರದಿ ಮತ್ತು ಕನಿಷ್ಠಕ್ಕೆ ಚಿತ್ರಗಳನ್ನೊಳಗೊಂಡ ನೇರವಾಗಿ ಅಪ್ಲೋಡ್ ಮಾಡುವುದರ ಕುರಿತು ಎಸ್.ಪಿ.ಸಿ.ಎ.ಯು ಖಚಿತಪಡಿಸಿಕೊಳ್ಳತಕ್ಕದ್ದು.

9. ಪ್ರಾಣಿ ಕಲ್ಯಾಣ ಮಂಡಳಿಯು ಪ್ರಸಕ್ತ ವರ್ಷದ್ದೂ ಸೇರಿದಂತೆ ಪ್ರತಿ ವರ್ಷ ಗೋಶಾಲೆಗಳಿಗೆ ಶ್ರೇಣಿಗಳನ್ನು ನೀಡುವುದು ಮತ್ತು ಉತ್ತಮ ಶ್ರೇಣಿಯನ್ನು ಹೊಂದಿರುವ ಗೋಶಾಲೆಗಳನ್ನು ಗುರುತಿಸುವುದು ಮತ್ತು ಅವುಗಳಿಗೆ ಪುರಸ್ಕಾರವನ್ನು ಪ್ರಾಣಿ ಕಲ್ಯಾಣ ಮಂಡಳಿಯ ವತಿಯಿಂದ ನೀಡುವುದು.

10. ಸರ್ಕಾರದ ಅನುದಾನ ಅಥವಾ ಪ್ರತಿಷ್ಠಿತ ಟ್ರಸ್ಟ್ ಗಳ ವತಿಯಿಂದ ನಡೆಸಲಾಗುವ ಗೋಶಾಲೆಗಳಲ್ಲಿನ ಜಾನುವಾರುಗಳ ನಿರ್ವಹಣಾ ವೆಚ್ಚ ಪ್ರತಿ ಜಾನುವಾರಿಗೆ ಪ್ರತಿ ದಿನಕ್ಕೆ ರೂ.17.30 ಗಳನ್ನು ನಿಗದಿ ಪಡಿಸಲಾಗಿರುತ್ತದೆ. ಒಂದು ವೇಳೆ ಟ್ರಸ್ಟ್ ಆಗಿದ್ದಲ್ಲಿ, ಸದರಿ ಟ್ರಸ್ಟ್ ಕಳೆದ 05 ವರ್ಷಗಳಿಂದ ಕನಿಷ್ಠ 100 ಜಾನುವಾರುಗಳನ್ನು ಹೊಂದಿರುವ ಗೋಶಾಲೆಯನ್ನು ನಡೆಸುತ್ತಿರಬೇಕು.

(ಪಿ.ಎಸ್. ಪ್ರದೀಪ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

Annexure for G.O. No. E- AHF 65 AHP 2021 Dated:11.08.2021

GUIDELINES FOR ESTABLISHMENT OF GOSHALAS IN ALL THE DISTRICTS.

1. The responsibility of establishing at least one Goshala in each district rests with the district level SPCA chaired by the Deputy Commissioner of the district. The Goshalas will be established before October 02[nd] of this year. The first and second installment of funds Rs. 24 Lakhs per district is released to the Deputy Commissioners of the districts for this purpose. Any additional requirement will be provided to the district, upon a resolution to this effect made by the SPCA of the district and sent to the Commissioner of Animal Husbandry and Veterinary Services Department.
2. For the Capital Expenditure involved in the establishment of the Goshala, the Deputy Commissioner shall coordinate with the Zilla Panchayat and other agencies for convergence of the existing programmes like creating bio fencing, cattle shed, agriculture ponds, growing fodder etc. Growing of fodder could be planned in a continuous manner including small trees and shrubs. In case there is any capital expenditure which cannot be met through convergence programme, then such expenditure shall be met with the initial installment of Rs. 24 Lakh.
3. Whether to create a new Goshala or to support or expand any existing Goshalas run by any private trusts in the district is a decision which will be taken by the SPCA. First priority should be given for establishing a new Goshala by the SPCA. However in a rare case, if the SPCA feels that an existing Goshala can be expanded then the SPCA shall record the reason thereof and go ahead with a PPP model.
4. Whether a new Goshala is established or an existing Goshala is expanded, it should be ensured that it can accommodate at least 0.75 percent of the total cattle population in the district. The SPCA shall plan the size of the Goshala accordingly.
5. The Goshala shall be run by the SPCA taking volunteer help, and in such cases where volunteers are not available on a continuous basis, then the SPCA may take the services of manpower on outsource basis as approved by the SPCA in the meeting chaired by the Deputy Commissioner.
6. For sustainability of the Goshalas, the SPCA shall explore ways and means to market the by- products of the Goshala through Khadi gramodyog or KMF or through KAPL (which manufactures pharmaceutical products using the by-products from Goshalas). The SPCA shall also take such steps for sustainable operation of the Goshala, like growing fodder and marketing by-products.

7. In case any volunteers come forward to take care of some of the cattle at their own farm or home it may be allowed by the SPCA after ascertaining and confirming the bonafide reasons thereof.
8. The SPCA shall ensure that the CCTV facilities are made at the Goshala and also daily atleast pictures and daily report about the Goshala is uploaded directly in the weblink provided by the department which will be live from 2nd October 2021 onwards.
9. The Animal Welfare Board will be ranking the Goshalas every year starting from this year and the best ranked Goshalas will be given recognition and appreciatory award every year by the Animal Welfare Board.
10. The expenditure that can be incurred on a cattle will be at the rate of Rs.17.30/cattle/day whether the expenditure is for the ghoshala run by the government or by reputed trusts. In case of trusts, then they should have been running ghoshala with minimum 100 cattle for last 5 years.

(ಪಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಪಶುಸಂಗೋಪನೆ)

ಅನುಬಂಧ-3

ಕ್ರ. ಸಂ	ಜಿಲ್ಲೆ	ಬಿಡುಗಡೆಗೊಳಿಸಿದ ಅನುದಾನ(ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರ	₹36.00
2	ಬೆಂಗಳೂರು ಗ್ರಾ.	₹53.50
3	ತುಮಕೂರು	₹53.50
4	ಚಿಕ್ಕಬಳ್ಳಾಪುರ	₹53.50
5	ಹಾಸನ	₹53.50
6	ಬಾಗಲಕೋಟೆ	₹36.00
7	ಮೈಸೂರು	₹53.50
8	ಚಿಕ್ಕಮಗಳೂರು	₹53.50
9	ದಕ್ಷಿಣ ಕನ್ನಡ	₹36.00
10	ರಾಯಚೂರು	₹53.50
11	ಹಾವೇರಿ	₹53.50
12	ಗದಗ	₹53.50
13	ಬಳ್ಳಾರಿ/ವಿಜಯನಗರ	₹53.50
14	ಕೊಪ್ಪಳ	₹53.50
15	ದಾವಣಗೆರೆ	₹53.50
16	ಚಾಮರಾಜನಗರ	₹53.50
17	ಚಿತ್ರದುರ್ಗ	₹36.00
18	ವಿಜಯಪುರ	₹53.50
19	ರಾಮನಗರ	₹53.50
20	ಬೆಳಗಾವಿ	₹53.50
21	ಮಂಡ್ಯ	₹36.00
22	ಕೊಡಗು	₹53.50
23	ಧಾರವಾಡ	₹53.50
24	ಕೋಲಾರ	₹53.50
25	ಉಡುಪಿ	₹53.50
26	ಉತ್ತರ ಕನ್ನಡ	₹36.00
27	ಶಿವಮೊಗ್ಗ	₹36.00
28	ಕಲಬುರಗಿ	₹36.00
29	ಯಾದಗಿರಿ	₹36.00
30	ಬೀದರ್	₹36.00

ಅನುಬಂಧ - 4

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೈಸೂರಿನ ಪಿಂಜಾರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ ನೀಡುವ ಕಾರ್ಯಕ್ರಮ ಅನುಷ್ಠಾನಗೊಳಿಸಲು ಷರತ್ತು ಹಾಗೂ ನಿಬಂಧನೆಗಳನ್ನು ನೇರ್ಪಡೆಗೊಳಿಸುವಿಕೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2009, ದಿನಾಂಕ:22.05.2009.
2. ಪತ್ರ ಸಂಖ್ಯೆ:ಆಪಸಂ/ಡಿವಿಡಿ-5/ಗೋಶಾಲೆ/2008-09, ದಿನಾಂಕ:17.05.2009.

***

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಅಶಕ್ತ / ನಿರುಪಯುಕ್ತ ಹಾಗೂ ಅನುತ್ಪಾದಕ ಜಾನುವಾರುಗಳ ರಕ್ಷಣೆ, ಪೋಷಣೆ ಮತ್ತು ಪಾಲನೆ ಮಾಡುವ ಸಲುವಾಗಿ ಮೈಸೂರಿನ ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ಬೆಂಬಲ ನೀಡುವ ಹೊಸ ಯೋಜನಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ಆಯುಕ್ತರು, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಬೆಂಗಳೂರು ರವರು ಈ ಯೋಜನಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಷರತ್ತು ಹಾಗೂ ನಿಬಂಧನೆಗಳು ಮತ್ತು ಒಡಂಬಡಿಕೆ ಪತ್ರಗಳ ವಿವರಗಳನ್ನು ಸೇರ್ಪಡೆಗೊಳಿಸಿ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 73 ಪಪಾಯೋ 2008,
ಬೆಂಗಳೂರು ದಿನಾಂಕ:09.07.2009.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು, ಮೈಸೂರಿನ ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ಬೆಂಬಲ ನೀಡುವ ಹೊಸ ಯೊಜನಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಆದೇಶದೊಂದಿಗೆ ಲಗತ್ತಿಸಿ ಅನುಬಂಧ 1 ಮತ್ತು 2ರಲ್ಲಿ ಸೂಚಿಸಿರುವಂತೆ ಒಡಂಬಡಿಕೆ ಪತ್ರ ಮತ್ತು ಇತರೆ ಷರತ್ತು ಹಾಗೂ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಕೆ.ಶ್ರೀನಿವಾಸಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

(138) (2)

ಅನುಬಂಧ-1

ಮೈಸೂರಿನ ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ಬೆಂಬಲ ನೀಡುವ ಕಾರ್ಯಕ್ರಮ ಅನುಷ್ಠಾನಗೊಳಿಸುವಿಕೆ

ಷರತ್ತು ಮತ್ತು ನಿಬಂಧನೆಗಳು:-

1. ಗೋಶಾಲೆಗಳಲ್ಲಿ ಜಾನುವಾರುಗಳನ್ನು ಪೋಷಿಸುತ್ತಿರಬೇಕು.

2. ಈ ಗೋಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳು, ಕುಡಿಯುವ ನೀರಿನ ವ್ಯವಸ್ಥೆ, ಕೊಳವೆ ಬಾವಿ, ಇತ್ಯಾದಿಗಳಿಗೆ ಶೇಕಡ 50ನ್ನು ಮಾತ್ರ ಒದಗಿಸಲು ಅವಕಾಶ ಇದೆ.

3. ~~ಪ್ರತಿ ಜಾನುವಾರು ನಿರ್ವಹಣಾ ವೆಚ್ಚದ ಪ್ರತಿ ದಿನಕ್ಕೆ ರೂ.22.00 ರಂತೆ ಇದ್ದು, ಇದರಲ್ಲಿ~~ ಶೇಕಡ 25 ರಷ್ಟನ್ನು ಮಾತ್ರ ಸಹಾಯಧನವಾಗಿ ಭರಿಸಲಾಗುವುದು.

4. ಪ್ರತಿ ಗೋಶಾಲೆಗೆ ಮೇವು ಅಭಿವೃದ್ಧಿ ಪ್ರತಿ ಹೆಕ್ಟೇರಿಗೆ ರೂ.10,000/- ರಂತೆ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ ಮೇವು ಬೆಳೆಗೆ ಸಹಾಯಧನವಾಗಿ ಭರಿಸುವುದು.

5. ಸಾವಯವ ಗೊಬ್ಬರ ಉತ್ಪನ್ನಗಳ ತಯಾರಿಕೆ ಪ್ರಾತ್ಯಕ್ಷತೆಗಾಗಿ ರೂ.10,000/- ಪ್ರತಿ ಗೋಶಾಲೆಗೆ ಒಂದು ಬಾರಿ ಸಹಾಯಧನವಾಗಿ ಭರಿಸುವುದು.

6. ಪಶುವೈದ್ಯಕೀಯ ಆರೋಗ್ಯ ನಿರ್ವಹಣೆಗೆ ಪ್ರತಿ ಜಾನುವಾರಿಗೆ ವರ್ಷಕ್ಕೆ ರೂ.300.00 ರಂತೆ ಆಯಾ ಜಿಲ್ಲಾ ಉಪನಿರ್ದೇಶಕರುಗಳಿಗೆ ವಾರ್ಷಿಕವಾಗಿ ನೀಡಬಹುದಾಗಿದೆ.

7. ಯೋಜನೆ ನೆರವನ್ನು ಪಡೆಯಲು ಸ್ಥಳೀಯ ಪಶುವೈದ್ಯರು / ತಾಲ್ಲೂಕು ಸಹಾಯಕ ನಿರ್ದೇಶಕರು, ನಿರ್ವಹಿಸುತ್ತಿರುವ ಜಾನುವಾರುಗಳ ದೃಢೀಕರಣದೊಂದಿಗೆ ಪ್ರಾಥಮಿಕ ವರದಿ ದೃಢೀಕರಣದೊಂದಿಗೆ ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಬೇಕು.

8. ~~ಪ್ರತಿ ಗೋಶಾಲೆ / ಪಿಂಜರಾಪೋಲ್ ಪ್ರಸ್ತಾವನೆಯು ಜಿಲ್ಲಾ SPCA ಯಿಂದ~~ ಅನುಮೋದನೆಗೊಂಡು, ನಂತರ ಸಹಾಯಧನಕ್ಕೆ ಶಿಫಾರಸ್ಸು ಮಾಡಬೇಕು.

9. ಈ ಮೊದಲು ಸುವರ್ಣ ಕರ್ನಾಟಕ ಗೋವಳಿ ಸಂರಕ್ಷಣಾ ಯೋಜನೆ ಅಡಿಯಲ್ಲಿ ಸಹಾಯಧನವನ್ನು ಸರ್ಕಾರದಿಂದ ಪಡೆದಿದ್ದಲ್ಲಿ, ಈ ಯೋಜನೆಯಿಂದ ನೆರವು ನೀಡಲು ಅವಕಾಶವಿರುವುದಿಲ್ಲ.

[illegible] ಸಂಬಂಧಿಸಿದ ಆರ್ಥಿಕ ನೆರವನ್ನು ಜಿಲ್ಲೆಯ ಉಪನಿರ್ದೇಶಕರಿಗೆ ಅನುದಾನ ಬಿಡುಗಡೆ [illegible] ಮೂಲಕ ಹಂಚಿಕೆ ಮಾಡಲಾಗುತ್ತಿದೆ. ಹಂಚಿಕೆಯಾದ ಅನುದಾನದ ಕ್ಲೈಮುಗಳನ್ನು [illegible] ಸಂಬಂಧಿಸಿದ ಗೋಶಾಲೆಯ ಅಧಿಕೃತ ಟ್ರಸ್ಟ್‌ನಿಂದ ಅನುದಾನ ಸ್ವೀಕೃತಿ ಬಿಲ್ ತಯಾರಿಸಿ, [illegible] ಸಂಬಂಧಿಸಿದ ಉಪನಿರ್ದೇಶಕರು ದೃಢೀಕರಣ ಹಾಗೂ ಶಿಫಾರಸ್ಸಿನ ಮೇರೆಗೆ [illegible] ಖಜಾನೆಯಿಂದ ಮೂಲಕ ನಗದು ಮಾಡಿ ಪಾವತಿಸಲು ಉಪನಿರ್ದೇಶಕರು ಕ್ರಮ [illegible]ವುದು.

Scanned by CamScanner

ಅನುಬಂಧ-1

ಯೋಜನೆ ಕುರಿತು ರಾಜ್ಯದಲ್ಲಿರುವ ಗೋಶಾಲೆ/ಪಿಂಜರಾಪೋಲ್‌ಗಳಿಗೆ ಪೂರಕ ನೆರವು ಯೋಜನೆ

[illegible] ಪತ್ರ

ಶ್ರೀ/ಶ್ರೀಮತಿ ______ ರವರು ______ ಕ್ರಮಾಂಕದ
ನೋಂದಣಿ ಹೊಂದಿರುವ ______
ಸಂಸ್ಥೆಯು ______
______
______ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ಪರವಾಗಿ ನಾನು ______ ರಾಜ್ಯದಲ್ಲಿರುವ ಗೋಶಾಲೆ/ಪಿಂಜರಾಪೋಲ್‌ಗಳಿಗೆ ಪೂರಕ ನೆರವು ಯೋಜನೆ ಅಡಿ ಸರ್ಕಾರದಿಂದ ಸಹಾಯಾನುದಾನವನ್ನು ಪಡೆದು, ಯೋಜನೆಯ ಮಾರ್ಗಸೂಚಿ ಷರತ್ತುಗಳನ್ನು ಅನುಷ್ಠಾನಗೊಳಿಸಲು ಬದ್ಧನಾಗಿರುತ್ತೇನೆ. ಅದರಂತೆ, ಕರ್ನಾಟಕ ಸರ್ಕಾರದ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯೊಂದಿಗೆ (ಇಲಾಖೆಯಿಂದ, ಅಂದರೆ ನಿರ್ದೇಶಕರು ಅಥವಾ ಅವರಿಂದ ನೇಮಿಸಲಾದ ಅಧಿಕಾರಿ) ಕೆಳಕಂಡ ಷರತ್ತುಗಳನ್ನು ಒಪ್ಪಂದ ಮಾಡಿಕೊಂಡಿರುತ್ತೇನೆ.

ರಾಜ್ಯದಲ್ಲಿರುವ ಗೋಶಾಲೆ/ಪಿಂಜರಾಪೋಲ್‌ಗಳಿಗೆ ಪೂರಕ ನೆರವು ಯೋಜನೆಯ ಷರತ್ತು ಮತ್ತು ನಿಬಂಧನೆ

1. ಸರ್ಕಾರ ನೀಡುವ ಅನುದಾನವನ್ನು ಕೇವಲ ಯೋಜನೆ ಉದ್ದೇಶಕ್ಕೆ ಮಾತ್ರ ಉಪಯೋಗಿಸಿಕೊಳ್ಳಲಾಗುವುದು.

2. ಸರ್ಕಾರೇತರ ಸಂಸ್ಥೆಗಳ ಗೋಶಾಲೆಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಪ್ರಾಣಿ ದಯಾ ಸಂಘದ ದೃಢ/ಶಿಫಾರಸ್ಸು ಹೊಂದಿರುತ್ತದೆ.

3. ಸದರಿ ಗೋಶಾಲೆಗಳು ಕಡ್ಡಾಯವಾಗಿ ಮೇವು ಉತ್ಪಾದನೆಗಾಗಿ ಕನಿಷ್ಠ 2.0 ಎಕರೆ ಜಮೀನು ಹೊಂದಿರುತ್ತದೆ ಹಾಗೂ 50 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತದೆ.

4. ಗೋಶಾಲೆಯಲ್ಲಿ ನಿರ್ವಹಿಸುತ್ತಿರುವ ಜಾನುವಾರುಗಳ ವಿವರಗಳ ದೃಢೀಕರಣವನ್ನು ಸ್ಥಳೀಯ ಪಶುವೈದ್ಯರು/ಸಹಾಯಕ ನಿರ್ದೇಶಕರಿಂದ ಪಡೆದು ಸಲ್ಲಿಸಿದೆ.

5. ಸರ್ಕಾರವು ನೀಡುವ ಅನುದಾನವನ್ನು ಗೋವುಗಳ ನಿರ್ವಹಣೆಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳಿಗಾಗಿ ಮತ್ತು ಯೋಜನೆಯಲ್ಲಿ ತಿಳಿಸಿದ ಕಾರ್ಯಕ್ರಮಗಳಿಗಾಗಿ ಮಾತ್ರವೇ ಉಪಯೋಗಿಸಲಾಗುವುದು.

6. ಸರ್ಕಾರ ನೀಡುವ ಅನುದಾನವು ಕೇವಲ ಪೂರಕ ಸಹಾಯಾನುದಾನವಾಗಿ [illegible]

Scanned by CamScanner

7. ಗೋಶಾಲೆಗಳಲ್ಲಿರುವ ಜಾನುವಾರುಗಳು, ನೀಡಲಾದ ಚಿಕಿತ್ಸೆ, ಹಾಗೂ ಮೇವು ಅನುದಾನಕ್ಕೆ ಸಂಬಂಧಿಸಿದ [illegible] ಮತ್ತು ದಾಖಲೆಗಳನ್ನು ನಿರ್ವಹಿಸಬೇಕು ಮತ್ತು [illegible] ಎಂಬ ಷರತ್ತಿಗೆ ಬದ್ಧವಾಗಿರುತ್ತದೆ.

8. ಇಲಾಖಾಧಿಕಾರಿಗಳು ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಗೋಶಾಲೆಗಳು ಸೂಕ್ತ ಅವಕಾಶ ಮಾಡಿಕೊಡತಕ್ಕದ್ದು. ಅಧಿಕಾರಿಗಳು ನೀಡುವ ಸಲಹೆ, ಸೂಚನೆಗಳನ್ನು ಪಾಲಿಸತಕ್ಕದ್ದು. ಪ್ರತಿ ಮಾಹೆ ಲೆಕ್ಕಪತ್ರಗಳನ್ನು ನಿಗದಿತ ನಮೂನೆಯಲ್ಲಿ ಪ್ರಗತಿ ವರದಿಯೊಂದಿಗೆ ಇಲಾಖೆಗೆ ಸಲ್ಲಿಸತಕ್ಕದ್ದು ಎಂಬ ಷರತ್ತು ಪಾಲಿಸಲಾಗುವುದು.

9. ಲೆಕ್ಕಪರಿಶೋಧಕರಿಂದ ಲೆಕ್ಕಪತ್ರಗಳನ್ನು ಪರಿಶೀಲಿಸಿದ ವಾರ್ಷಿಕ ಲೆಕ್ಕಪತ್ರ ವರದಿಗಳನ್ನು ಸಲ್ಲಿಸುವುದು ಹಾಗೂ ಧನವಿನಿಯೋಗಿತ ಪತ್ರವನ್ನು ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರ ದೃಢೀಕರಣದ ಮೂಲಕ ಆಯುಕ್ತಾಲಯಕ್ಕೆ ಸಲ್ಲಿಸಲಾಗುವುದು.

10. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಮತ್ತು ಇತರೆ ಸರ್ಕಾರಿ ಇಲಾಖೆಗಳು ಹಮ್ಮಿಕೊಳ್ಳುವ ಸಾವಯವ ಗೊಬ್ಬರ ತಯಾರಿಸುವ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಉಚಿತವಾಗಿ ಅವಕಾಶ ಮಾಡಿಕೊಡಲಾಗುವುದು.

11. ಯೋಜನೆಯ ಷರತ್ತುಗಳು ತಿಳುವಳಿಕೆಗಳನ್ನು ಅನುಸರಿಸದೇ ಇದ್ದಲ್ಲಿ, ಅಥವಾ ಯೋಜನೆಯನ್ನು ದುರುಪಯೋಗಪಡಿಸಿಕೊಂಡಲ್ಲಿ, ಸಂಸ್ಥೆಯ ಹೆಸರಿನಲ್ಲಿರುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸರ್ಕಾರದಿಂದ ಜಮೀನು ಹೊಂದಿರುವ ಸಂಸ್ಥೆಗಳಿಂದ ಷರತ್ತುಗಳ ಉಲ್ಲಂಘನೆಯಾದಲ್ಲಿ, ನೀಡಲಾದ ಅನುದಾನವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲಾಗುವುದು ಎಂಬ ಷರತ್ತಿಗೆ ಬದ್ಧವಾಗಿರುವುದು.

(ಬಿ.ಕೆ. ಶ್ರೀನಿವಾಸಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

Scanned by CamScanner

02	[illegible]	
03	[illegible]	
04	[illegible]	
05	[illegible]	
	[illegible]	
	[illegible]	
06	[illegible] 2 [illegible]	
07	[illegible] 1 [illegible]	
08	[illegible] 53 [illegible] ([illegible])	
09	[illegible]	
10	[illegible] ([illegible])	
11	[illegible]	
12	[illegible]	
13	[illegible] ([illegible])	
14	[illegible] ([illegible]) [illegible]	

Scanned by CamScanner

[illegible]	[illegible]	
02	[illegible]	
03	[illegible] ಅನುದಾನ ಮಾಡುವುದು (ಆರ್.ಕೆ.ವಿ.ವೈ) ಒಂದು ರಾಸಿಗೆ ಕನಿಷ್ಠ 10x4-40 sqft per sqft Rs.250/- ರಂತೆ ಅನುದಾನವನ್ನು ಅಥವಾ ನೀಡಿರುವ ಅನುದಾನ ಯಾವುದು ಕನಿಷ್ಠ —ಅದು	
04	ದೈನಂದಿನ ಜಾನುವಾರು ನಿರ್ವಹಣೆ ರೂ: 70/- ದಿನಕ್ಕೆ ಶೇ– 25% ರಂತೆ ಅಂದರೆ ರೂ: 17.50/- ಪ್ರಾಣಿಗೆ/ದಿನ (200 ಜಾನುವಾರುಗಳಿಗೆ ಮಿತಿಗೊಳಿಸಿದೆ.)	
05	ಮೇವು ಅಭಿವೃದ್ಧಿಗೆ ರೂ:10,000 ಪ್ರತಿ ಹೆಕ್ಟೇರ್ ಗರಿಷ್ಠ ಮಿತಿ 2 ಹೆಕ್ಟೇರ್ ವರೆಗೆ	
06	ಸಾವಯವ ಗೊಬ್ಬರ ಘಟಕ ಸ್ಥಾಪನೆ ರೂ–10,000/- (ಒಂದು ಗೋಶಾಲೆಗೆ ಒಂದು ಬಾರಿ ಮಾತ್ರ)	
07	ಜಾನುವಾರು ಆರೋಗ್ಯ ನಿರ್ವಹಣೆ ವಾರ್ಷಿಕವಾಗಿ ಒಂದು ರಾಸಿಗೆ ರೂ:300 ರಂತೆ	

Scanned by CamScanner

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಇ(ಜಾಸಂ):ಪಿಂಜೋ/ಇಗೋಶಾ:2016-17

ಆಯುಕ್ತರವರ ಕಛೇರಿ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಬೆಂಗಳೂರು, ದಿನಾಂಕ: 1-6-2017

ಟಿಪ್ಪಣಿ

ದಿನಾಂಕ: 27-07-2016 ರಂದು ಪ್ರಧಾನ ಕಾರ್ಯದರ್ಶಿಗಳು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಪಿಂಜರಾಪೋಲ್/ ಇತರೆ ಗೋಶಾಲೆಗಳಿಗೆ ಸಹಾಯಾನುಧಾನ ಯೋಜನೆ ಅನುಷ್ಠಾನಕ್ಕೆ ಸಂಬಂಧವಾಗಿ ಜರುಗಿದ ಸಭೆಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕೆಳಕಾಣಿಸಿದ ಮಾರ್ಗಸೂಚಿಗಳನುಸಾರ ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.

- ಮೂಲಭೂತ ಸೌಕರ್ಯದ ಸಹಾಯಧನವನ್ನು ನೀಡುವಾಗ ಕನಿಷ್ಠ 50 ರಾಸುಗಳು ಹಾಗೂ ಗರಿಷ್ಠ 200 ರಾಸುಗಳಿಗೆ ಮಿತಿಗೊಳಿಸತಕ್ಕದ್ದು.
- ಸಹಾಯಧನ ಮಂಜೂರಾತಿಗೆ ಸಂಸ್ಥೆಗಳು ಕಡ್ಡಾಯವಾಗಿ ನೋಂದಾವಣಿಯಾಗಿರತಕ್ಕದ್ದು.
- ಸಂಸ್ಥೆಯಲ್ಲಿ ನಿರ್ವಹಿಸಲಾಗುತ್ತಿರುವ ಜಾನುವಾರುಗಳನ್ನು ಕಡ್ಡಾಯವಾಗಿ ವಿವಿಧ ರೋಗಗಳ ವಿರುದ್ಧ ಕಾಲಕಾಲಕ್ಕೆ ಲಸಿಕೆ ಹಾಕಿಸಿ, ಸಾಂಕ್ರಾಮಿಕ ರೋಗಗಳ ವಿರುದ್ಧ ರಕ್ಷಣೆ ಒದಗಿಸುವುದು.

ಸದರಿ ನಿರ್ದೇಶನುಸಾರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಲ್ಲಿಸಲು ಸೂಚಿಸಿದೆ.

ಆಯುಕ್ತರು

ಗೆ,
ಅಪರ ನಿರ್ದೇಶಕರು (ಜಾನುವಾರು ಸಂಪನ್ಮೂಲ)
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಬೆಂಗಳೂರು.

Scanned by CamScanner



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 146 ಪಪಾಯೋ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:15.10.2018

ತಿದ್ದುಪಡಿ ಆದೇಶ

1) ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2008, ದಿನಾಂಕ:09.07.2009ರಲ್ಲಿ
ವಿಧಿಸಿರುವ ಷರತ್ತು ಸಂಖ್ಯೆ:09ನ್ನು "ಸುವರ್ಣ ಗೋತಳಿ ಸಂರಕ್ಷಣೆ ಯೋಜನೆಯಡಿಯಲ್ಲಿ ಅನುದಾನ
ಪಡೆದುಕೊಂಡಿರುವ ಸಂಸ್ಥೆಗಳು ಅನುದಾನವನ್ನು ಉದ್ದೇಶಿತ ಮೂಲಭೂತ ಸೌಕರ್ಯಗಳಿಗೆ
ಸದುಪಯೋಗಪಡಿಸಿಕೊಂಡಿದ್ದಲ್ಲಿ, ಮೈಸೂರಿನ ಪಿಂಜ್ರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ
ಯೋಜನೆಯಡಿ ವಾರ್ಷಿಕ ನಿರ್ವಹಣೆ ವೆಚ್ಚವನ್ನು ಪಡೆಯಲು ಅರ್ಹತೆಯನ್ನು ಪಡೆದಿರುತ್ತದೆ" ಎಂದು
ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

2) ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2008, ದಿನಾಂಕ:09.07.2009ರ
ಅನುಬಂಧ-I ರ ಪ್ರಕಾರ ಅನುದಾನ ಕೋರುವ ಸಂಸ್ಥೆಗಳು ಸಲ್ಲಿಸಬೇಕಾದ ಒಡಂಬಡಿಕೆ ಪತ್ರವನ್ನು ಪ್ಯಾರಾ 3
ರನುಸಾರ "ಸದರಿ ಗೋಶಾಲೆಗಳು, ಸಂಸ್ಥೆಗಳು ಕಡ್ಡಾಯವಾಗಿ ಮೇವು ಉತ್ಪಾದನೆಗಾಗಿ ಅವಶ್ಯಕ 2.0 ಹೆಕ್ಟೇರು
ಜಮೀನು ಹೊಂದಿರುತ್ತದೆ ಹಾಗೂ 50 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತದೆ" ಎಂಬುದನ್ನು "ಸದರಿ
ಪಿಂಜ್ರಾಪೋಲ್ ಅಥವಾ ಗೋಶಾಲೆಯು ಮೇವು ಉತ್ಪಾದನೆಗಾಗಿ ಅವಶ್ಯಕ 2.0 ಹೆಕ್ಟೇರ್ ಜಮೀನನ್ನು ಸಂಸ್ಥೆಯ
/ ಟ್ರಸ್ಟಿಗಳ / ಟ್ರಸ್ಟಿಯ ಹೆಸರಿನಲ್ಲಿ ಹೊಂದಿರುತ್ತದೆ ಅಥವಾ ದಾನಿಗಳೊಂದಿಗೆ / ಲೀಸ್‌ದಾರರೊಂದಿಗೆ 5
ವರ್ಷಗಳ ಕರಾರನ್ನು ಹೊಂದಿರುತ್ತದೆ (ಕರಾರು ಪತ್ರ ಲಗತ್ತಿಸಿದೆ) ಹಾಗೂ 50 ರಾಸುಗಳನ್ನು ನಿರ್ವಹಣೆ
ಮಾಡಲಾಗುತ್ತದೆ" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

3) ಒಡಂಬಡಿಕೆಯ ಪ್ಯಾರಾ ಸಂಖ್ಯೆ:11 ರಲ್ಲಿ "ಯೋಜನೆಯ ಷರತ್ತುಗಳು ತಿಳುವಳಿಕೆಗಳನ್ನು
ಅನುಸರಿಸದೇ ಇದ್ದಲ್ಲಿ ಅಥವಾ ಯೋಜನೆಯನ್ನು ದುರುಪಯೋಪಡಿಸಿಕೊಂಡಲ್ಲಿ ಸಂಸ್ಥೆಯ ಹೆಸರಿನಲ್ಲಿರುವ
ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸರ್ಕಾರದಿಂದ ಜಮೀನು ಹೊಂದಿರುವ ಸಂಸ್ಥೆಗಳಿಂದ
ಷರತ್ತುಗಳ ಉಲ್ಲಂಘನೆಯಾದಲ್ಲಿ ನೀಡಲಾದ ಅನುದಾನವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು
ಮಾಡಲಾಗುವುದು ಎಂಬ ಷರತ್ತಿಗೆ ಬದ್ಧವಾಗಿರುವುದು" ಎಂಬುದರ ಬದಲಿಗೆ "ಯೋಜನೆಯ ಷರತ್ತುಗಳು
ತಿಳುವಳಿಕೆಗಳನ್ನು ಅನುಸರಿಸದೇ ಇದ್ದಲ್ಲಿ ಅಥವಾ ಯೋಜನೆಯನ್ನು ದುರುಪಯೋಗಪಡಿಸಿಕೊಂಡಲ್ಲಿ ಸಂಸ್ಥೆಯ /
ಟ್ರಸ್ಟಿಗಳ / ಟ್ರಸ್ಟಿಯ / ದಾನಿಯ ಹೆಸರಿನಲ್ಲಿರುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು,
ಸರ್ಕಾರದಿಂದ ಪಡೆದ ಒಟ್ಟು ಅನುದಾನವನ್ನು ಒಂದೇ ಹಿಡಿಗಂಟಿನಲ್ಲಿ ಶೇ.12ರ ಬಡ್ಡಿಯೊಂದಿಗೆ ಸರ್ಕಾರಕ್ಕೆ

-2-

Scanned with CamScanner

ಪಾವತಿಸಲಾಗುವುದು ಮತ್ತು ಸರ್ಕಾರದಿಂದ ಜಮೀನು ಹೊಂದಿರುವ ಸಂಸ್ಥೆಗಳಿಂದ ಷರತ್ತುಗಳ ಉಲ್ಲಂಘನೆಯಾದಲ್ಲಿ ನೀಡಲಾದ ಅನುದಾನವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲಾಗುವುದು" ಎಂಬ ಷರತ್ತಿಗೆ "ಸಂಸ್ಥೆ / ಟ್ರಸ್ಟಿ / ದಾನಿಗಳು ಬದ್ಧವಾಗಿರುತ್ತಾರೆ" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/10/2018
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

<u>ಇವರಿಗೆ:</u>

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ಕಾರ್ಯದರ್ಶಿ, ಪಿಂಜರಾಪೋಲ್ ಸೊಸೈಟಿ (ರಿ), ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು-570 025.
5. ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
6. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

<u>ಪ್ರತಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.